ದಿನಾಂಕಃ **04-03-2025** ರಂದು ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಬಿ ಕೆ ವೈ : ವಕೀಲರಿಂದಃ

ನಾನು ತಿಪಟೂರಿನ ಕಾರೋನೇಷನ್ ರಸ್ತೆಯಲ್ಲ ವಾಸ ಇದ್ದೇನೆ ಎಂದರೆ ಸರಿ . ದಾವಾ ಸ್ವತ್ತು ಹಳೇಪಾಳ್ಯದ ಮುಖ್ಯ ರಸ್ತಯಲ್ಲಿದೆ ಎಂದರೆ ಸರಿ . ನಾನು ವಾಸ ಇರುವ ಮನೆಯಿಂದ ದಾವಾ ಸ್ವತ್ತಿಗೆ ಸುಮಾರು 3 ರಿಂದ 4 ಕಿ ಮೀ. ದೂರ ಇದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿಗೆ ಸಂಬಂಪಟ್ಟ ಹಾಗೆ ನಾನು ಅಲ್ಲಿ ಎಲ್ಲಿಯೂ ವಾಸ ಇಲ್ಲ ಎಂದರೆ ಸಾಕ್ಷಿಯು ಅದು ನನ್ನ ನಿವೇಶನ ಎಂದು ಉತ್ತರಿಸುತ್ತಾರೆ. ದಾವಾ ಸ್ವತ್ತಿನ ಮೂಲ ಮಾಲೀಕರು ನನ್ನ ಅತ್ತಿಗೆ ಉಮಾ ಎಂದರೆ ಸರಿ . ನನ್ನ ಅಣ್ಣನಿಗೆ ಒಬ್ಬ ಮಗ ಹಾಗೂ ಮೂರು ಜನ ಹೆಣ್ಣುಮಕ್ಕಳು ಎಂದರೆ ಸರಿ . ಅವರುಗಳೆಂದರೆ ಜಿ.ಆರ್. ಈಶ್ವರ್ , ಜಿ.ಆರ್. ಸಿಂಧು , ಜಿ. ಅರ್. ಸ್ವಾತಿ , ಜಿ. ಅರ್. ಲಕ್ಷ್ಮಿ ಸದರಿ ಉಮಾರವರಿಗೆನನ್ನ ಅಣ್ಣನ ಫವತಿ ವಾರಸು ಮೇರೆಗೆ ಖಾತೆ ಬಂದಿರುತ್ತದೆ ಎಂದರೆ ಸರಿ . ನಾನು ಹಾಕಿರುವ ದಾವಾ ಆಸ್ತಿಯ ಪಕ್ಕದ ಆಸ್ತಿಯವರೆಗೂ ಮುನಿಸಿಪಲ್ ಖಾತಾದಲ್ಲಿದೆ ಎಂದರೆ ಸಾಕ್ಷಿಯು ನನ್ನ ದಾವಾ ಆಸ್ತಿಯು ಮುನಿಸಿಪಲ್ ಖಾತಾದಲ್ಲಿ ಬರುತ್ತದೆ ಪಕ್ಕದ ಆಸ್ತಿಯ ಬಗ್ಗೆ ನನಗೆ ಮಾಹಿತಿ ಇಲ್ಲ. ಈ ದಾವಾ ಆಸ್ತಿಗೆ ಸಂಬಂದಪಟ್ಟ ಹಾಗೆ ನನ್ನ ಅಣ್ಣ ಅಥವಾ ಅತ್ತಿಗೆ ಮುನಿಸಿಪಲ್ ಕಛೇರಿ ಅಥವಾ ಅದಕ್ಕೆ ಸಂಬಂದಪಟ್ಟ ಕಛೇರಿಗೆ ಏನಾದರೂ ದೂರನ್ನು ನೀಡಿದ್ದರಾ ಎಂದರೆ ಸಾಕ್ಷಿ ನನಗೆ ಗೊತ್ತಿರುವ ಹಾಗೆ ಮಾಹಿತಿ ಇಲ್ಲ ಎನ್ನುತ್ತಾರೆ. ನನ್ನದು ಹಲವಾರು ಕಡೆ ಸ್ವತ್ತುಗಳು ಕಾನೂನು ಬದ್ಧವಾಗಿ ಖರೀದಿ ಮಾಡಿರುತ್ತೇನೆ ಎಂದರೆ ಸರಿ . ದಾವಾ ಸ್ವತ್ತು ಖಾಲಿ ನಿವೇಶನ ಆಗಿದ್ದಂತಹ ಸಮಯದಲ್ಲಿ ಯಾವುದೇ ತಂಟೆ ತಕರಾರು ಮಾಡಿರಲಿಲ್ಲ ಎಂದರೆ ಸಾಕ್ಷಿ ಆ ಸಮಯದಲ್ಲಿ ಯಾರೂ ಮನೆಯನ್ನು ಕಟ್ಟಿರುವುದಿಲ್ಲ ಆಗಾಗಿ ನಾವು ಯಾವುದೇ ತಕರಾರು ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಯು ಮನೆಯನ್ನು ಕಟ್ಟಲು ಆರಂಭಿಸಿದಾಗ ನಾನು ತಕರಾರನ್ನು ಮಾಡಿರುತ್ತೇನೆ ಎಂದರೆ ಅವರು ನನ್ನ ಜಾಗದಲ್ಲಿ ಒತ್ತುವರಿ ಮಾಡಿರುವ ಕಾರಣ ತಕರಾರು ತೆಗೆದಿರುವುದಾಗಿ ನುಡಿಯುತ್ತಾರೆ. ಪ್ರತಿವಾದಿಯ ಆಸ್ತಿಯನ್ನು ನಾನು 2-3 ಬಾರಿ ಕ್ರಯಕ್ಕೆ ಖರೀದಿ ಮಾಡುವುದಾಗಿ ಬೇಡಿಕೆ ಇಟ್ಟಿದ್ದೆ ಎಂದರೆ ಸರಿಯಲ್ಲ ಪ್ರತಿವಾದಿಯು ಕ್ರಯಕ್ಕೆ ಅವರ ಆಸ್ತಿಯನ್ನು ಕೊಡುವುದಿಲ್ಲ ಎಂದು ಹೇಳಿದ ಕಾರಣ ನಾನು ಈ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಜಿಪಿಎ ಆಗಿ ಪಡೆಯುವ ಮುಂಚಿತವಾಗಿ ನನ್ನ ಅತ್ತಿಗೆಯವರು ಯಾವುದೇ ದಾವೆಯನ್ನು ಹೂಡಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯು ಕ್ರಯಕ್ಕೆ ನೀಡದ ಕಾರಣ ನನ್ನ ಅತ್ತಿಗೆಯಿಂದ ಜಿಪಿಎ ಪಡೆದುಕೊಂಡು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯು ಕ್ರಯಕ್ಕೆ ಖರೀದಿ ಮಾಡಿರುವ ವಿಸ್ತೀರ್ಣದಲ್ಲಿ ಮನೆಯನ್ನು ಕಟ್ಟುಕೊಂಡಿದ್ದಾರೆ ಎಂದರೆ ಸರಿಯಲ್ಲ ಪ್ರತಿವಾದಿಯು ತಾನು ಏನಾದರೂ ಒತ್ತುವರಿ ಮಾಡಿದ್ದಲ್ಲಿ ಅದನ್ನು ಒಡೆದು ಹಾಕುವಂತೆ ನ್ಯಾಯಾಲಯಕ್ಕೆ ಅಂಡರ್ ಟೇಕಿಂಗ್ ಮೆಮೋ ವನ್ನು ಸ್ವಂತ ಖರ್ಚಿನಿಂದ ಸಲ್ಲಿಸಿದರು ಎಂದರೆ ಸರಿ . ಆ ಬಳಿಕ ಇಬ್ಬರ ವಕೀಲರು ಸೇರಿ ಕಮಿಷನರ್ ರವರನ್ನು ನೇಮಕ ಮಾಡಿದ್ದು ಅದರಂತೆ ಶ್ರೀ ಬಿ.ಡಿ . ಜಗದೀಶ್ ರವರು ಕಮೀಷನರ್ ರವರು ನೇಮಕಗೊಂಡಿರುತ್ತಾರೆ ಎಂದರೆ ಸರಿ. ಅದರಂತೆ ಶ್ರೀ ಬಿ.ಡಿ.

ಜಗದೀಶ್ ರವರು ಇಬ್ಬರು ಪಕ್ಷಗಾರರಿಗೆ ಹಾಗೂ ಅವರ ವಕೀಲರಿಗೂ ದಿನಾಂಕ 09-06-2024 ಮಧ್ಯಾಹ್ನ 3.00 ರ ಸಮಯಕ್ಕೆ ನೋಟೀಸನ್ನು ಜಾರೀ ಮಾಡಿದ್ದು ಅದರಂತೆ ತಾವುಗಳು ಹಾಜರರಿಬೇಕೆಂದು ಕೋರಿದ್ದು. ಆ ಬಳಿಕ ವಾದಿ ಮತ್ತು ಪ್ರತಿವಾದಿಗಳು ಹಾಗೂ ಅವರ ವಕೀಲರುಗಳು ಅಲ್ಲಿ ಹಾಜರಿರುತ್ತಾರೆ. ಶ್ರೀ ಬಿ.ಡಿ. ಜಗದೀಶ್ ರವರು ವಾದಿ ಹಾಗೂ ಪ್ರತಿವಾದಿಗಳು ನೀಡಿದಂತಹ ದಾಖಲಾತಿಗಳನ್ನು ಪಡೆದುಕೊಂಡು ಆ ಬಳಿಕ ದಾವಾ ಸ್ವತ್ತನ್ನು ಅಳತೆ ಮಾಡಲು ಮುಂದಾಗಿರುತ್ತಾರೆ ಎಂದರೆ ಸರಿ . ಸದರಿ ದಾಖಲಾತಿಗಳ ಮೇರೆಗೆ ಹಾಗೂ ಪಕ್ಷಗಾರರ ಅನುಮತಿ ಪಡೆದು ಅಳತೆ ಮಾಡಿರುತ್ತಾರೆ ಎಂದರೆ ಸರಿ . ಸದರಿ ವರದಿಯಲ್ಲಿ ಪ್ರತಿವಾದಿಯು ಅವರು ಕ್ರಯಕ್ಕೆ ಪಡೆದುಕೊಂಂತೆ ಮನೆಯನ್ನು ನಿರ್ಮಿಸಿ ಚರಂಡಿಯನ್ನು ಬಿಟ್ಟಿದ್ದು ಯಾವುದೇ ಒತ್ತುವರಿಯಾಗಿರುವುದಿಲ್ಲ ಎಂದು ಸಲ್ಲಿಸಿರುತ್ತಾರೆ. ಸಾಕ್ಷಿ ಮುಂದುವರೆದು ಪೂರ್ವ ಭಾಗದಲ್ಲಿ ಚರಂಡಿಯನ್ನು ಬಿಟ್ಟಿರುತ್ತಾರೆ. ದಕ್ಷಿಣ ಭಾಗದಲ್ಲಿ 15 ಅಡಿ ರಸ್ತೆಯನ್ನು ಬಿಟ್ಟು ನಮ್ಮ ನಿವೇಶನ ಇರುತ್ತದೆ ಎಂದು ನುಡಿಯುತ್ತಾರೆ.

ಸದರಿ ಪ್ರತಿವಾದಿಯು ದಕ್ಷಿಣ ಭಾಗದಲ್ಲಿ 15 ಅಡಿ ಬಿಟ್ಟು 2 ಅಡಿ ಚರಂಡಿಯನ್ನು ಬಿಟ್ಟು ಆನಂತರ ಮನೆಯನ್ನು ನಿರ್ಮಾಣ ಮಾಡಿರುತ್ತಾರೆ ಅವರು ಕ್ರಯಕ್ಕೆ ಮನೆಯನ್ನು ಕೊಡದ ಕಾರಣ ನಾನು ಸುಳ್ಳು ಸಾಕ್ಷಿ ನುಡಿಯತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯು ಕ್ರಯಕ್ಕೆ ಕಡಿಮ ಬೆಲೆಗೆ ಕೊಡಲಿಲ್ಲ ಎಂಬ ಉದ್ದೇಶದಿಂದ ಅವರಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ಸಾಕ್ಷಿನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ವರದಿಗೆ ಪಕ್ಷಗಾರರು ಹಾಗೂ ಅವರ ವಕೀಲರುಗಳು ಸಹಿಯನ್ನು ಮಾಡಿರುತ್ತಾರೆ ಎಂದರೆ ಸರಿ . ಸಾಕ್ಷಿ ಮುಂದುವರೆದು ಅದರೆ ಸದರಿ ವರದಿಗೆ ಸಂಬಂದಪಟ್ಟ ನಕ್ಷೆಯನ್ನು ಸರಿಯಾಗಿ ತಯಾರು ಮಾಡಿರುವುದಿಲ್ಲ ಮತ್ತು 6 ಅಡಿ ಜಾಗವನ್ನು ಒತ್ತುವರಿ ಮಾಡಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಸದರಿ ವರದಿಯಲ್ಲಿ ಪ್ರತಿವಾದಿಯರಿಗೆ 9 ಅಡಿ ಉಳಿಕೆ ಇದೆ ಎಂದು ಬರೆದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವರದಿಯಲ್ಲಿ ಯಾವುದೇ ರೀತಿಯ ಒತ್ತುವರಿ ಕಂಡು ಬಂದಿಲ್ಲ ಎಂದರೆ ಸರಿಯಲ್ಲ ಎನ್ನುತ್ತಾರೆ . ನಾನು ಸದರಿ ವರದಿಯ ಮೇರೆ ಮೇಲ್ಮನವಿಯನ್ನು ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ಅದು ಸರಿ ಇಲ್ಲ ಎಂದು ನಾವು ತಕರಾರನ್ನು ಸಲ್ಲಿಸಿರುತ್ತೇವೆ.

ಈ ಹಂತದಲ್ಲಿ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶವನ್ನು ಕೋರಿದ್ದು ಕೋರಿಕೆ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಅಧಿಕ ಸಿವಿಲ್ ನ್ಯಾಯಾಧೀಶರು,
ತಿಪಟೂರು.